# ಕಿಶೋರ್, ಶ್ರೇಯಸ್ ವಾರಿಯರ್ಸ್ ಬಾಯ್ಸ್

**ಮೈಸೂರು:** ಜೊಜೊ ಕ್ರಿಕೆಟ್ ಕ್ಲಬ್‌ನ ನಂದ ಕಿಶೋರ್ ಹಾಗೂ ಎಂಯುಸಿಎಸ್ ಕ್ಲಬ್‌ನ ಎನ್.ಶ್ರೇಯಸ್ ಕರ್ನಾಟಕ ಪ್ರೀಮಿಯರ್ ಲೀಗ್(ಕೆಪಿ ಎಲ್)ನಲ್ಲಿ ಪ್ರತಿನಿಧಿಸಲು ಮೈಸೂರು ವಾರಿ ಯರ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಮೈಸೂರು ವಾರಿಯರ್ಸ್ ಆ.17ರಂದು ಎಸ್‌ಡಿಎನ್‌ಆರ್ ಮೈದಾನ(ಗಂಗೋತ್ರಿ ಗ್ಲೇಡ್ಸ್)ದಲ್ಲಿ ನಡೆಸಿದ ಪ್ರತಿಭಾನ್ವೇಷಣೆ ಆಯ್ಕೆ ಶಿಬಿರ (ಟ್ಯಾಲಂಟ್ ಹಂಟ್)ನಲ್ಲಿ ಭಾಗವಹಿಸಿದ್ದ ನಂದ ಕಿಶೋರ್ ಹಾಗೂ ಶ್ರೇಯಸ್ ಉತ್ತಮ ಪ್ರದರ್ಶನ ನೀಡುವ ಮೂಲಕ ಕೆಪಿಎಲ್‌ನಲ್ಲಿ ಆಡುವ ಅವಕಾಶ ಗಿಟ್ಟಿಸಿಕೊಂಡಿದ್ದಾರೆ.

ಸುಮಾರು 92 ಆಟಗಾರರು ಭಾಗವಹಿಸಿದ್ದ ಶಿಬಿರದಲ್ಲಿ 40 ಬೌಲರ್‌ಗಳು, 14 ಬ್ಯಾಟ್ಸ್‌ಮನ್‌ಗಳು, 30 ಆಲ್ ರೌಂಡರ್‌ಗಳು ಮತ್ತು 8 ವಿಕೆಟ್ ಕೀಪರ್ ಮತ್ತು ಬ್ಯಾಟ್ಸ್‌ಮನ್‌ಗಳಲ್ಲಿ 24 ಆಟಗಾರರನ್ನು ಆರಿಸಿಕೊಳ್ಳಲಾಗಿತ್ತು. ಇವರ ನಡುವೆ ನಡೆಸಿದ ಟಿ20 ಪಂದ್ಯದಲ್ಲಿ ಇಬ್ಬರು ಆಯ್ಕೆಯಾಗಿದ್ದಾರೆ. ಇವರ ಹೆಸರುಗಳು ಸೆ.7ರಂದು ಪ್ರಕಟವಾಗಲಿರುವ ಮೈಸೂರು ವಾರಿಯರ್ಸ್‌ಗೆ ಅಧಿಕೃತವಾಗಿ ಸೇರ್ಪಡೆಗೊಳ್ಳಲಿದೆ.



ನಂದ ಕಿಶೋರ್



ಶ್ರೇಯಸ್